ಈ ಸ್ಟೇಟ್ ಫಾರೆಸ್ಟ್ ಪ್ರತ್ಯೇಕವಾದ ಒಂದು ರವಿನ್ಯೂ ಸರ್ವೇ ಗ್ರಾಮವಾಗಿರುವದಲ್ಲದೆ, ಅದರ ಚಕ್ಕುಬಂದಿ ವಿವರ ಹ್ಯಾಗಂದರೆ, ಪುತ್ತರಕ್ಕೆ ಕೊಂಗಳಲಿ ಮತ್ತು ಚಿಕ್ಕ ಆರಕಲಿಗೂಡು ಗ್ರಾಮಗಳ ಗಡಿ, ಪೂರ್ವಕ್ಕೆ ವಿಜಾಪುರದ ಗಡಿ, ದಕ್ಷಿಣಕ್ಕೆ ತಟ್ಟೆಕೆರೆ, ಕಲ್ಲೂರು ಮತ್ತು ಕೊಳ್ಳಂಗಿ ಈ ಗ್ರಾಮಗಳ ಗಡಿ, ಪಶ್ಚಿಮಕ್ಕೆ ಮುಸವತ್ತೂರು ಮತ್ತು ಬಬ್ಬುಗಳಲಿ ಈ ಗ್ರಾಮಗಳ ಗಡಿ,

ಹಾಸನ ತಾಲ್ಲೂಕು ಗೆಂಡೆಕಟ್ಟೆ ಕಾವಲ್ ಪ್ಯಾಂಟೇರ್ಷ್.

ಈ ಕಾವಲಿಗೆ ಸುತ್ತಲೂ ಹದ್ದು ತೋರಿಸುವ ಡಿಮಾರ್ಕೇರ್ಷ ಆಗಳು, ಮತ್ತು ಬೇಲಿ ಸಹ ಯಿರುತ್ತಲ್ಲದೆ, ಈ ಕಾವಲಿನ ಚಾತರ್ಫ, ಪುತ್ತರಕ್ಕೆ ಗೌಡಹಳ್ಳಿ ಗ್ರಾಮದಗಡಿ, ಪೂರ್ವಕ್ಕೆ ಬುಸ್ತೆನಹಳ್ಳಿ ಮತ್ತು ದೊಡ್ಡ ಹೊನ್ನೇನಹಳ್ಳಿ ಗಡಿ, ದಕ್ಷಿಣಕ್ಕೆ ಕಾಚನಾಯಕನಹಳ್ಳಿ ಮತ್ತು ದೊಡ್ಡ ಬಸವನಹಳ್ಳಿ, ಈ ಗ್ರಾಮಗಳ ಗಡಿ, ಪ್ಚ್ಚಿಮಕ್ಕೆ ಬಮ್ಮನಾಯಿನಹಳ್ಳಿ ಮತ್ತು ಆಡುವಳ್ಳಿ ಗಡಿ.

ಹಾಸನ ತಾಲ್ಲೂಕು ಭಕ್ತರವಳ್ಳಿ ಪ್ಯಾಂಟೇರ್ಷ್‌ಗೆ.

ಪುತ್ತರಕ್ಕೆ ಹುಲ್ಲುಕುಂದ ಗ್ರಾಮದ ಸಾಗುವಳಿ ಜಮೀನುಗಳ ಬದುವಿನಲ್ಲಿ ಆರು ಅಡಿ ಅಗಲಕ್ಕೆ ಸಾಫ್‌ಮಾಡಿ ಹಾಕಿರುವ ಲೈನ್.

ಪೂರ್ವಕ್ಕೆ ಭಕ್ತರವಳ್ಳಿ ಗ್ರಾಮದ ಮತ್ತು ತಾವರೆಕೆರೆ ತಲಾವಿನ ಸಾಗುವಳಿ ಜಮೀನುಗಳ ಬದುವಿನಲ್ಲಿ ಆರು ಅಡಿ ಅಗಲಕ್ಕೆ ಸಾಫ್ ಮಾಡಿ ಹಾಕಿಯಿರುವ ಲೈನ್.

ದಕ್ಷಿಣಕ್ಕೆ ನಾಗವಾರದ ಹಿಕ್ಕೆವರಿಗಿನ ಬರಗೆಕಲ್ಲು ಕಣಿವೆಯ ಹಳೇ ರಸ್ತೆ ಅಲ್ಲಿಂದ ಚಿಕ್ಕ ಬೆಟ್ಟದ ಫಾರೆಸ್ಟ್ ಡಿಮಾರ್ಕೇರ್ಷ ಲೈನಿಗೆ ಕೇರಿಯಿರುವ ಆರು ಅಡಿ ಅಗಲಕ್ಕೆ ಸಾಫ್‌ಮಾಡಿ ಹಾಕಿರುವ ಲೈನ್.

ಪಶ್ಚಿಮಕ್ಕೆ ಚಿಕ್ಕ ಬೆಟ್ಟ ದೊಡ್ಡಬೆಟ್ಟದ ಫಾರೆಸ್ಟಿನ ಸರಹದ್ದಿನ ಆಜೆ ಆರು ಅಡಿ ಅಗಲಕ್ಕೆ ಸಾಫ್ ಮಾಡಿ ಹಾಕಿರುವ ಲೈನ್.

ಯಲ್. ರಿಕ್ಕೆಟ್ಸ್,
ಫಾರೆಸ್ಟ್ಸ್ ಇನ್‌ಸ್ಪೆಕ್ಟರ್ ಜನರಲ್.

ನೋಟಿಫಿಕೇರ್ಷ.

ಮೈಸೂರು ಡಿಸ್ಟ್ರಿಕ್ಟ್.

ತಾರೀಖು 25ನೇ ಡಿಸಂಬರ್ 1888.

ಇದರಿಂದ ತಿಳಿಯಪಡಿಸುವದೇನಂದರೆ, ಸ್ ೧೮೭೮ನೇ ಇಸವಿ ಜೂನ್ 8ನೇ ತಾರೀಖಿನ ಫಾರೆಸ್ಟ್ ರೂಲ್ಸ್ 13ನೇ ಸೆಕ್‌ರ್ಷ ಅನುಸರಿಸಿ ಈ ಕೆಳಗೆ ನಮೂದಿಸಿರುವ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇರ್ಷಗಳು 1889ನೇ ಇಸವಿ ಜನವರಿ 15ನೇ ತಾರೀಖು ಲಾಗಾಯತು ಅದೆ ಇಸವಿ ಮೇ 31ನೇ ತಾರೀಖುವರಿವಿಗೆ ಬಂದ್ ಮಾಡಲ್ಪಟ್ಟಿವೆ:—

ಈ ಮೇಲ್ಕಂಡ ಅಯ್ಯಾಂನಲ್ಲಿ ಯಾವವಿಧವಾದ ಷಿಕಾರಿಯೂ ನಿರೋಧಿಸಲ್ಪಟ್ಟಿದೆ, ಅತಿಕ್ರಮ ಪ್ರವೇಶಮಾಡುವರು ಪ್ರಾಸಿಕ್ಯೂಷನಿಗೆ ಬಳಪಟ್ಟಾರು.

ಬೆಂಕಿತಡೆ ಬಗ್ಯೆ ಬಂದುಮಾಡಲ್ಪಟ್ಟ ಫಾರೆಸ್ಟ್ಗಳು, ಪ್ಲಾಂಟೇರ್ಷಗಳು.

ಹುಣಸೂರು ತಾಲ್ಲೂಕು	..	ವೀರನಹೊಸಹಳ್ಳಿ ಸ್ಟೇಟ್ ಫಾರೆಸ್ಟ್.
ಹೆಗ್ಗಡದೇವನಕೋಟೆ ತಾಲ್ಲೂಕು	..	ಮೇಲೆಕುಪ್ಪೆ, ಕಾಕನಕೋಟೆ ಬೇಗೂರು, ಮತ್ತು ಏನೂರು ಮಾರಗುಡಿ ಸ್ಟೇಟ್ ಫಾರೆಸ್ಟ್ಗಳು.
ಗುಂಡ್ಲುಪೇಟೆ ತಾಲ್ಲೂಕು	..	ಬೇರಂಬಾಡಿ ಮತ್ತು ಬಂಡಿಪುರ ಸ್ಟೇಟ್ ಫಾರೆಸ್ಟ್ಗಳು.
		ಪ್ಲಾಂಟೇರ್ಷಗಳು.
ಹುಣಸೂರು ತಾಲ್ಲೂಕು	..	ನಾಯಿಹಳ್ಳಿ, ಗುರುಪುರ ಮತ್ತು ವೆರಿಯಾಪಟ್ಣ ಸಂಡಲ್ ಪ್ಲಾಂಟೇರ್ಷಗಳು ಮತ್ತು ದೊಡ್ಡಹೊಸೂರು, ಆನೆಚೌಕೂರು, ಮತ್ತು ವೀರನಹೊಸಹಳ್ಳಿ ರಿಪ್ರೊಡಕ್‌ರ್ಷ ಬ್ಲಾಕುಗಳು.
ಹೆಗ್ಗಡದೇವನಕೋಟೆ ತಾಲ್ಲೂಕು	..	ಕಾಕನಕೋಟೆ, ಮಾಸ್ತಿಗುಡಿ ಮತ್ತು ಮಂಜಕಗೌಡನಹಳ್ಳಿ ತೇಗು ಪ್ಲಾಂಟೇರ್ಷಗಳು ಮತ್ತು ಹಂಪಾಪುರ ರಿಪ್ರೊಡಕ್‌ರ್ಷ ಬ್ಲಾಕು.
ಗುಂಡ್ಲುಪೇಟೆ ತಾಲ್ಲೂಕು	..	ಮದ್ದೂರು ಅಳಲಿ ಪ್ಲಾಂಟೇರ್ಷ.

ಫಾರೆಸ್ಟ್ ಸೂಪರ್‌ಡಿರೆಂಟೆಂಡರ ಆಫಿಸ್,
1888ನೇ ಇಸವಿ ಡಿಸಂಬರ್ ತಾರೀಖು 20.

ಸಿ. ಇ. ಎಂ. ರನೆಲ್,
ಮೈಸೂರ ಫಾರೆಸ್ಟ್ ಸೂಪರ್‌ಡಿರೆಂಟೆಂಡೆಂಟ್.

ನೋಟಿಫಿಕೇರ್ಷ.

ತಾರೀಖು ನೇ ಡಿಸಂಬರ್ 1888.

ಇದರಿಂದ ಸಕಲ ಜನಗಳಿಗೂ ತಿಳಿಯಪಡಿಸುವದೇನಂದರೆ, ಸ್ ೧೮೭೮ನೇ ಇಸವಿ ಜೂನ್ 8ನೇ ತಾರೀಖಿನ ಫಾರೆಸ್ಟ್ ರೂಲ್ಸ್ 13ನೇ ಸೆಕರ್ಷ ಅನುಸರಿಸಿ ಈ ಕೆಳಗೆ ನಮೂದಿಸಿ ಇರುವ ಸ್ಟೇಟ್ ಫಾರೆಸ್ಟ್ಗಳು ಮತ್ತು ಪ್ಲಾಂಟೇರ್ಷಗಳು 1889ನೇ ಇಸವಿ ಜನವರಿ ಗುರ್ಸ್ ಲಾಗಾಯತು ಮೇ ಆಖೈರ್‌ವರಿಗಿನ ಬಿನಲು ಕಾಲದಲ್ಲಿ ಪರಭಾರೆ ಜನಗಳಿಗೆ ಬಂದು ಮಾಡಲ್ಪಟ್ಟಿರುತ್ತದೆ ಈ ಮೇಲ್ಕಂಡ ಅಯ್ಯಾಂನಲ್ಲಿ ಯಾವ ವಿಧವಾದ ಷಿಕಾರಿಯೂ ನಿರೋಧಿಸಲ್ಪಟ್ಟಿದೆ. ಅತಿಕ್ರಮಪ್ರವೇಶ ಮಾಡುವರು ಪ್ರಾಸಿಕ್ಯೂರ್ಷಗೆ ಬಳಪಟ್ಟಾರು.

ನಂಬರು.	ಸ್ಟೇಟ್ ಫಾರೆಸ್ಟ್ ವ ಪ್ಲಾಂಟೇಷ್ನ ಹೆಸರು.	ತಾಲ್ಲೂಕು.
1	ಸಖ್ತೂರ ಬೈಲ್ ಸ್ಟೇಟ್ ಫಾರೆಸ್ಟ್	ಶಿವಮೊಗ್ಗಾ
2	ಡಿಟೋ	ಡಿಟೋ
3	ಕಂಕರಗುಡ್ಡ ಸ್ಟೇಟ್ ಫಾರೆಸ್ಟ್	ಶಿವಮೊಗ್ಗಾ ಮತ್ತು ತೀರ್ಥಹಳ್ಳಿ.
4	ಆಲಕೊಳ ಸಂದಲ್ ಪ್ಲಾಂಟೇಷ್ನ	ಶಿವಮೊಗ್ಗಾ
5	ಅನವೆನಕಟ್ಟೆ ಸಂದಲ್ ಮತ್ತು ಸಾಗುವಾನಿ ಪ್ಲಾಂಟೇಷ್ನ	ಡಿಟೋ
6	ಉಬ್ರಾಣಿ ಕುಕ್ಕುವಾಡ ಸ್ಟೇಟ್ ಫಾರೆಸ್ಟ್	ಚನ್ನಗಿರಿ ತೀರ್ಕರೆ ಶಿವಮೊಗ್ಗಾ
7	ಕಾಳೀನಹಳ್ಳಿ ಸಾಗುವಾನಿ ಪ್ಲಾಂಟೇಷ್ನ	ಶಿಕಾರಿಪುರ
8	ಶಿಡ್ಲಹಳ್ಳಿ ಡಿಟೋ	ಸೊರಬ
9	ಕವಲ್ಲಿ ತೊಗರ್ಸಿ ಮತ್ತು ಬನವನಂದಿಹಳ್ಳಿ ಸ್ಟೇಟ್ ಫಾರೆಸ್ಟ್ ..	ಶಿಕಾರಿಪುರ
10	ತೆಲಗಡೆ ಪೆರುತ್ತು ಅರೇ ತೆಲಗಡ್ಡೆ ಸ್ಟೇಟ್ ಫಾರೆಸ್ಟ್	ಸೊರಬ
11	ಮಲೆಬೆನ್ನೂರ ಸ್ಟೇಟ್ ಫಾರೆಸ್ಟ್	ಹೊನ್ನಾಳಿ ಮತ್ತು ದಾವಣಗೆರೆ

ಇ. ಪಿ. ಲೌರಿ,
ಅಸಿಸ್ಟೆಂಟ್ ಕಲೆಕ್ಟರವೇಟರ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟ್ ಸೆಶನ್ಸ್ ಜಡ್ಜ್ ಯವರ ಕೋರ್ಟಿನಲ್ಲಿ.

1888ನೇ ಇಸವಿ ಅರ್ಜೀ ನಂಬರ್ 1100.

ಕಾರ್ಕಾಹಳ್ಳಿ ತಾಲ್ಲೂಕು ಸೋಮನಹಳ್ಳಿ ಹೋಬಳಿ ಗಬ್ಬಾಡಿ ಗ್ರಾಮದಲ್ಲಿದ್ದು ವ್ಯವಹರಿಸುತ್ತಿದ್ದ ಕರಿಬಸಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಸಿದ್ದಬಸಪ್ಪ ಮೃತಪಟ್ಟ ಸದರೀ ಕರಿಬಸಪ್ಪನಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಸ್ಥಾಪಿತಸ್ಥಳದ ಸಿದ್ದ ಬಸಪ್ಪನು ಗಬ್ಬಾಡಿ ವಾಸಸ್ಥನಾಗಿ ಮೃತಪಟ್ಟ ಕರಿಬಸಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಸಿದ್ದಬಸಪ್ಪನ ಅರ್ಜೀಯನ್ನು 1889ನೇ ಇಸವಿ ಜನವರಿ ತಿಂಗಳು ತಾರೀಖು 18ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕರಿಬಸಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1888ನೇ ಇಸವಿ ಅರ್ಜೀ ನಂಬರ್ 1068.

ಕಾರ್ಕಾಹಳ್ಳಿ ತಾಲ್ಲೂಕು ಬಿಜ್ಜವಹಳ್ಳಿಲಿದ್ದು ಮೃತಪಟ್ಟ ಪುಟ್ಟಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಕಾಳಯ್ಯ, ಮೃತಪಟ್ಟ ಸದರೀ ಪುಟ್ಟಯ್ಯನಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಕಾರ್ಕಾಹಳ್ಳಿ ತಾಲ್ಲೂಕು ಕೋಡಿಹಳ್ಳಿ ಹೋಬಳಿ ಬಿಜ್ಜವಹಳ್ಳಿ ಸ್ಥಳದ ಕಾಳಯ್ಯನು ಸದರೀ ಬಿಜ್ಜವಹಳ್ಳಿ ವಾಸಸ್ಥನಾಗಿ ಮೃತಪಟ್ಟ ಪುಟ್ಟಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಕಾಳಯ್ಯನ ಅರ್ಜಿಯನ್ನು 1889ನೇ ಇಸವಿ ಜನವರೀ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1888ನೇ ಇಸವಿ ಡಿಸಂಬರ್ ತಿಂಗಳು 19ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.